ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 120 ಸ್ವೀಮರ 2016

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 13.07.2016

ತುರ್ತು

**ಅನಧಿಕೃತ ಟಿಪ್ಪಣಿ**

ವಿಷಯ: ಸರ್ಕಾರದ ಎಲ್ಲಾ ಇಲಾಖೆಯ ಸಕ್ಷಮ ಪ್ರಾಧಿಕಾರಗಳು ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮಾಹಿತಿ ಹಕ್ಕು ಕಾಯ್ದೆ ಅರ್ಜಿಗಳಿಗೆ ಮಾಹಿತಿ ನೀಡುವಾಗ ಅವರುಗಳ ಹೆಸರು ಮತ್ತು ವಿಳಾಸವನ್ನು ನಮೂದಿಸುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ ಇವರ ಪತ್ರ ಸಂಖ್ಯೆ: ಕ.ಮಾ.ಅ/13/ಎಎಸ್‌ಓ/2016 ದಿನಾಂಕ: 30.06.2016.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ ದಿನಾಂಕ: 30.06.2016ರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಪತ್ರದಲ್ಲಿ ಕೋರಿರುವಂತೆ, ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 26(3)(ಬಿ)ರನ್ವಯ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ಸಂದರ್ಭಾನುಸಾರ, ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿಳಾಸ, ದೂರವಾಣಿ, ಫ್ಯಾಕ್ಸ್ ಸಂಖ್ಯೆ, ಹಾಗೂ ಇ-ಮೇಲ್ ವಿವರಗಳು ಮತ್ತು ಕಲಂ 7(ii)ರನ್ವಯ ಅಧೀನದಲ್ಲಿ ಬರುವ ಸಕ್ಷಮ ಪ್ರಾಧಿಕಾರಗಳ ಹೆಸರು ಹಾಗೂ ವಿಳಾಸವನ್ನು ವೆಬ್‌ಸೈಟ್ ಹಾಗೂ ಸೂಚನಾ ಫಲಕಗಳಲ್ಲಿ ಪ್ರಕಟಿಸಿ ಸರ್ಕಾರಕ್ಕೆ 15 ದಿನಗಳ ಒಳಗಾಗಿ ಮಾಹಿತಿ ನೀಡುವಂತೆ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅರ್ಜಿದಾರರಿಗೆ ಮಾಹಿತಿಯನ್ನು ಒದಗಿಸುವಾಗ ಸಕ್ಷಮ ಪ್ರಾಧಿಕಾರಗಳ ಹೆಸರು ಹಾಗೂ ವಿಳಾಸವನ್ನು ಕಡ್ಡಾಯವಾಗಿ ನಮೂದಿಸುವಂತೆ ತಿಳಿಸಿದೆ.

(ಸಿದ್ದೇಶ್ ಮೊತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
(ಸೇವೆಗಳು-ಎ ಮತ್ತು ಸ್ವೀಮರ ಶಾಖೆ)

ಎಸ್.ಆರ್.ಎಲ್.ಎಂ. ದಿನಾಂಕ 1848 18/7/16 ಬೆಂಗಳೂರು

ಇವರಿಗೆ:

1. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ(ಎಂ.ಜಿ.ಎನ್.ಆರ್.ಇ.ಜಿ.ಎ).
2. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
3. ನಿರ್ದೇಶಕರು(ಪಂ.ರಾಜ್-1)/(ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
4. ಜಂಟಿ ಕಾರ್ಯದರ್ಶಿ, (ಆಡಳಿತ-1)/(ಆಡಳಿತ-2), ಗ್ರಾ. ಮತ್ತು ಪಂ.ರಾಜ್ ಇಲಾಖೆ.
5. ನಿರ್ದೇಶಕರು(ಸುಗ್ರಾಯೋ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6. ನಿರ್ದೇಶಕರು(ಎನ್.ಆರ್.ಎಲ್.ಎಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
7. ನಿರ್ದೇಶಕರು(ಪಿಎಂಐ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

......2

8. ನಿರ್ದೇಶಕರು(ಸ್ವ ಉಕಾ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
9. ಮುಖ್ಯಸ್ಥರು, ಕಾನೂನು ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
10. ಉಪ ಕಾರ್ಯದರ್ಶಿ(ಗ್ರಾನೀಸ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
11. ಮುಖ್ಯಸ್ಥರು(ಗ್ರಾಮ ಸ್ವರಾಜ್ ಯೋಜನೆ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
12. ಉಪ ನಿರ್ದೇಶಕರು(ಗ್ರಾಮೂಸೌ-1)/ (ಗ್ರಾಮೂಸೌ-2)/ಪಶ್ಚಿಮ ಘಟ್ಟ, ಗ್ರಾ.ಅ.ಪ. ಇಲಾಖೆ.
13. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
14. ಸರ್ಕಾರದ ಅಧೀನ ಕಾರ್ಯದರ್ಶಿ, ಸೇವೆಗಳು-ಎ, ಗ್ರಾ ಮತ್ತು ಪಂ.ರಾಜ್ ಇಲಾಖೆ.
15. ಸರ್ಕಾರದ ಅಧೀನ ಕಾರ್ಯದರ್ಶಿ, ಸೇವೆಗಳು-ಬಿ & ಸಿ, ಗ್ರಾ ಮತ್ತು ಪಂ.ರಾಜ್ ಇಲಾಖೆ.
16. ಸರ್ಕಾರದ ಅಧೀನ ಕಾರ್ಯದರ್ಶಿ, ಜಿ.ಪಂ/ಗ್ರಾ.ಪಂ, ಗ್ರಾ ಮತ್ತು ಪಂ.ರಾಜ್ ಇಲಾಖೆ.

ಕಾರ್ಯದರ್ಶಿ

ದೂರವಾಣಿ : ಕಛೇರಿ : ೨೨೩೭೧೯೫೯
Telephone : Office: 22371959
ಕಾರ್ಯದರ್ಶಿಗಳ ಕಾರ್ಯಾಲಯ
ಕರ್ನಾಟಕ ಮಾಹಿತಿ ಆಯೋಗ
ಗೇಟ್-೨, ಕೊಠಡಿ ಸಂಖ್ಯೆ: ೩೩೩
ಬಹುಮಹಡಿಗಳ ಕಟ್ಟಡ, ಬೆಂಗಳೂರು-೫೬೦ ೦೦೧
**Office of the Secretary**
**Karnataka Information Commission**
Gate-2, Room No. 333, 3rd Floor
Multistoried Building
Bengaluru-560 001
e-mail: secy-kic@karnataka.gov.in

ಸಂಖ್ಯೆ: ಕ.ಮಾ.ಆ/13/ಎಎಸ್‌ಓ/2016 ದಿನಾಂಕ:30/6/2016

ಡಾ|| ಎನ್. ನಾಗಾಂಬಿಕಾದೇವಿ, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು - 560 001

ಮಾನ್ಯರೆ,

ವಿಷಯ: ಸರ್ಕಾರದ ಎಲ್ಲಾ ಇಲಾಖೆಯಯ ಸಕ್ಷಮ/ಪ್ರಾಧಿಕಾರಗಳು ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮಾಹಿತಿ ಹಕ್ಕು ಕಾಯ್ದೆ ಅರ್ಜಿಗಳಿಗೆ ಮಾಹಿತಿ ನೀಡುವಾಗ ಅವರುಗಳ ಹೆಸರು ಮತ್ತು ವಿಳಾಸವನ್ನು ನಮೂದಿಸುವ ಬಗ್ಗೆ.

*****

ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ ಅಧಿನಿಯಮ 2005ರ ಕಲಂ 26(3)(ಬಿ) ಈ ಕೆಳಕಂಡಂತಿದೆ.

"**26. ಸಮುಚಿತ ಸರ್ಕಾರವು ಕಾರ್ಯಕ್ರಮಗಳನ್ನು ಸಿದ್ಧಪಡಿಸುವುದು:-** 5ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರದ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ಸಂದರ್ಭಾನುಸಾರ, ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ಅಂಚೆ ಮತ್ತು ರಸ್ತೆ ವಿಳಾಸ, ದೂರವಾಣಿ ಮತ್ತು ಫ್ಯಾಕ್ಸ್ ಸಂಖ್ಯೆ ಹಾಗೂ ಲಭ್ಯವಿದ್ದಲ್ಲಿ ಇ-ಮೇಲ್ ವಿಳಾಸ"

ಕರ್ನಾಟಕ ಮಾಹಿತಿ ಹಕ್ಕು ನಿಯಮಗಳು 2005ರ ನಿಯಮ 7(ii) ಈ ಕೆಳಕಂಡಂತಿದೆ.

**7. 19ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಪೀಲು:** "ಯಾರ ತೀರ್ಮಾನದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ಮತ್ತು ವಿಳಾಸ"

ಬಹುಮುಖ್ಯವಾಗಿ, ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಮತ್ತು ವಿಳಾಸಗಳನ್ನು ಇಲಾಖೆಗಳು ಅರ್ಜಿದಾರರಿಗೆ ಸುಲಭವಾಗಿ ದೊರಕುವಂತೆ ಕೈಗೊಳ್ಳಬೇಕಾದ ಕ್ರಮಗಳನ್ನು ಕೈಗೊಂಡಿರುವುದಿಲ್ಲ.

ಸಾರ್ವಜನಿಕರು 6(1)ರಡಿ ಮಾಹಿತಿ ಕೋರಿ ಅರ್ಜಿಗಳನ್ನು ಸಲ್ಲಿಸಿದಾಗ ಸಂಬಂಧಪಟ್ಟ ಪ್ರಾಧಿಕಾರಗಳು ಮಾಹಿತಿಯನ್ನು ಒದಗಿಸುವಾಗ ಅವರ ಹೆಸರು ಮತ್ತು ಪದನಾಮ ಇವುಗಳನ್ನು ತಿಳಿಸದೇ ಇರುವುದರಿಂದ, ಮೇಲ್ಮನವಿ ಅರ್ಜಿಗಳಲ್ಲಿ ಸಂಬಂಧಪಟ್ಟವರಿಗೆ ನೋಟೀಸುಗಳನ್ನು ಕಳುಹಿಸುವುದು ಕಷ್ಟಸಾಧ್ಯವಾಗುತ್ತಿದೆ. ಸಾರ್ವಜನಿಕ ಮಾಹಿತಿ ಅಧಿಕಾರಿಯವರು ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 7(ii)ರನ್ವಯ ಅವರ ಹೆಸರನ್ನು ನಮೂದಿಸದೆ ಕೇವಲ ಪದನಾಮವನ್ನು ನಮೂದಿಸಿ ಮಾಹಿತಿಯನ್ನು ನೀಡುತ್ತಿರುವುದು ಮಾಹಿತಿ ಹಕ್ಕು ಅಧಿನಿಯಮದ ಉಲ್ಲಂಘನೆಯಾಗಿರುತ್ತದೆ. ಈ ರೀತಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅವರ ಹೆಸರು ಮತ್ತು ಸರಿಯಾದ ವಿಳಾಸವನ್ನು ತಿಳಿಸದೇ ಇರುವುದರಿಂದ, ಕರ್ನಾಟಕ ಮಾಹಿತಿ ಆಯೋಗದಲ್ಲಿ ಮಾಹಿತಿ ಹಕ್ಕು ಕಾಯ್ದೆ ಅಧಿನಿಯಮ 19(3)ರಡಿ ದಾಖಲಾಗುವ 2ನೇ ಮೇಲ್ಮನವಿ ಪ್ರಕರಣವನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ವಿಳಂಬವಾಗುತ್ತಿದೆ.

ಆದಕಾರಣ ತಾವು ಇದರ ಬಗ್ಗೆ ವೈಯಕ್ತಿಕ ಗಮನಹರಿಸಿ, ತಮ್ಮ ಇಲಾಖೆಯ, ತಮ್ಮ ಅಧೀನದಲ್ಲಿ ಬರುವ ಸಕ್ಷಮ ಪ್ರಾಧಿಕಾರಗಳ ಹೆಸರು ಹಾಗೂ ಅವರ ಅಧೀನದಲ್ಲಿರುವ ಬರುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ವಿಳಾಸ, ದೂರವಾಣಿ, ಫ್ಯಾಕ್ಸ್ ಸಂಖ್ಯೆ, ಇ.ಮೇಲ್ ಹಾಗೂ ವೆಬ್‌ಸೈಟ್‌ನಲ್ಲಿ ಇವುಗಳನ್ನು ಪ್ರಕಟಣೆ ಮಾಡಿರುವ ವಿವರಗಳ ಮಾಹಿತಿಯನ್ನು 15 ದಿನಗಳ ಒಳಗಾಗಿ ಆಯೋಗಕ್ಕೆ ಒದಗಿಸುವಂತೆ ಹಾಗೂ ಈ ಮಾಹಿತಿಗಳನ್ನು update ಮಾಡಿ ಸೂಚನಾಫಲಕಗಳಲ್ಲಿ ಪ್ರಕಟಿಸಲು ಕೋರಿದೆ. ಇನ್ನು ಮುಂದೆ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅರ್ಜಿದಾರರಿಗೆ ಮಾಹಿತಿಯನ್ನು ಒದಗಿಸುವಾಗ ಮೇಲೆ ತಿಳಿಸಿರುವಂತೆ ವಿವರಗಳನ್ನು ಕಡ್ಡಾಯವಾಗಿ ನಮೂದಿಸಲು ಸೂಕ್ತ ನಿರ್ದೇಶನವನ್ನು ನೀಡುವಂತೆ ತಮ್ಮನ್ನು ಕೋರಲು ಆಯೋಗದಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಕಾರ್ಯದರ್ಶಿ
ಕರ್ನಾಟಕ ಮಾಹಿತಿ ಆಯೋಗ.

ಸಂಜೀವಿನಿ – ಕೆಎಸ್‌ಆರ್‌ಎಲ್‌ಪಿಎಸ್
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಂಖ್ಯೆ: ಕೆಎಸ್‌ಆರ್‌ಎಲ್‌ಪಿಎಸ್/04/ಆರ್‌ಟಿಐ/2015-16 ದಿನಾಂಕ: 21.03.2016

ಗೆ,

ಶ್ರೀ ಸಿದ್ದೇಶ ಮೋತಲಕಟ್ಟಿ,
ಸರ್ಕಾರದ ಅಧೀನ ಕಾರ್ಯದರ್ಶಿ,
(ಸೇವೆಗಳು – ಎ ಮತ್ತು ಸ್ವೀಮರ ಶಾಖೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಮಾನ್ಯರೇ,

ವಿಷಯ: ಸಾರ್ವಜನಿಕ ಪ್ರಾಧಿಕಾರಗಳ/ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಮಾಹಿತಿಯನ್ನು ಒದಗಿಸುವ ಬಗ್ಗೆ.

ಉಲ್ಲೇಖ: ಗ್ರಾಅಪ 32 ಸ್ವೀಮರ 2016 ದಿನಾಂಕ:08.03.2016.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿವರ ಇಂತಿದೆ.

ಶ್ರೀ. ಬೆಳ್ಳೇಗೌಡ
ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು,
(ಸಾಮಾಜಿಕ ಅಭಿವೃದ್ಧಿ ಮತ್ತು ಸಂವಹನ),
ಸಂಜೀವಿನಿ(ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ),
ಅಭಯ ಸಂಕೀರ್ಣ, ನಂ-55, 4ನೇ ಮಹಡಿ, ರಿಸಲ್ದಾರ್ ಬೀದಿ,
ಶೇಷಾದ್ರಿಪುರಂ, ಬೆಂಗಳೂರು-560020.
ಮೊಬೈಲ್ ನಂ. 9448768344
ಕಛೇರಿ – 080-23083000.
ಇ-ಮೇಲ್: spmsd.com2015@gmail.com

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

21/3/16

ಅಭಿಯಾನ ನಿರ್ದೇಶಕರು
ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್

Sri Bellegowda

Public Information Officer & State Programme Manager(SD&Com)

Sanjeevini-Karnataka State Livelihood Promotion Society

Abhaya Sankeerna, No-55, 4th floor, Risaldar Street

Sheshadripuram, Bangalore-560020

Mobile -9448768344

Office-08023083000

Email- spmsd.com2015@gmail.com